ಕರ್ನಾಟಕ ಸರ್ಕಾರ

## ತಾಂತ್ರಿಕ ಶಿಕ್ಷಣ ಇಲಾಖೆ

ಸಂ: **DTE-ADMI0SCH1/16/2024**

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ ಬೆಂಗಳೂರು - 560 001.
ದಿನಾಂಕ: 18-09-2024

**-:: ಸುತ್ತೋಲೆ ::-**

**ವಿಷಯ** : 2024-25ನೇ ಸಾಲಿಗೆ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಎ.ಐ.ಸಿ.ಟಿ.ಇ ಯ ಪ್ರಗತಿ, ಸಕ್ಷಮ್ ಮತ್ತು ಸ್ವನಾಥ್ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ** : ಸದಸ್ಯ ಕಾರ್ಯದರ್ಶಿಗಳು, ಎ.ಐ.ಸಿ.ಟಿ.ಇ ನವದೆಹಲಿ ಇವರ ಅಧಿಸೂಚನ ಪತ್ರ ಸಂಖ್ಯೆ: 49-I/StDC/SAG Bureau/Sch./Adv./Pragati & Saksham/2024-25, Date: 09-09-2024.

-000000-

ಎ.ಐ.ಸಿ.ಟಿ.ಇ ಯಿಂದ ಮಾನ್ಯತೆ ಪಡೆದಿರುವ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಮತ್ತು ವಿಶೇಷ ಸಾಮರ್ಥ್ಯದ ಮಕ್ಕಳ ಪ್ರಗತಿಗಾಗಿ, ಆರ್ಥಿಕ ನೆರವು ನೀಡಲು ಎ.ಐ.ಸಿ.ಟಿ.ಇಯು ಪ್ರಗತಿ, ಸಕ್ಷಮ್ ಮತ್ತು ಸ್ವನಾಥ್ ವಿದ್ಯಾರ್ಥಿವೇತನ ಯೋಜನೆಗಳನ್ನು ಈ ಕೆಳಕಂಡಂತೆ ಪ್ರಾರಂಭಿಸಲಾಗಿರುತ್ತದೆ.

1. **ಪ್ರಗತಿ ವಿದ್ಯಾರ್ಥಿವೇತನ ಯೋಜನೆ** - ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮಿತಿಯೊಳಗೆ ಇರುವ ಕುಟುಂಬದ 02 ವಿದ್ಯಾರ್ಥಿನಿಯರಿಗೆ ಮಾತ್ರ.

2. **ಸಕ್ಷಮ್ ವಿದ್ಯಾರ್ಥಿವೇತನ ಯೋಜನೆ** - ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮಿತಿಯೊಳಗೆ ಇರುವ ಶೇ.40ಕ್ಕಿಂತ ಹೆಚ್ಚು ವಿಶೇಷ ಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳಿಗೆ ಮಾತ್ರ.

3. **ಸ್ವನಾಥ್ ವಿದ್ಯಾರ್ಥಿವೇತನ ಯೋಜನೆ** - ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮಿತಿಯೊಳಗೆ ಇರುವ ವಿದ್ಯಾರ್ಥಿಯು ಈ ಕೆಳಗಿನ ಯಾವುದಾದರು ಒಂದು ವರ್ಗದಿಂದ ಬಂದವರಾಗಿರಬೇಕು.
   ಅನಾಥರಗಿರಬೇಕು / ಪೋಷಕರು ಕೋವಿಡ್-19 ನಿಂದ ಸಾವನ್ನಪ್ಪಿರಬೇಕು / ಸಶಸ್ತ್ರ ಪಡೆಗಳ ವಾರ್ಡ್‌ಗಳು ಮತ್ತು ಕೇಂದ್ರ ಅರೆಸೈನಿಕ ಪಡೆಗಳ ಕಾರ್ಯಾಚರಣೆಯಲ್ಲಿ ಹುತಾತ್ಮರಾಗಿರುವ (ಶಹೀದ್) ವಿದ್ಯಾರ್ಥಿಗಳಿಗೆ ಮಾತ್ರ.

ಮುಂದುವರೆದು, ಉಲ್ಲೇಖದ ಅಧಿಸೂಚನೆಯಲ್ಲಿ ತಿಳಿಸಿರುವಂತೆ 2024-25ನೇ ಸಾಲಿಗೆ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಮತ್ತು ವಿಶೇಷ ಸಾಮರ್ಥ್ಯದ ಮಕ್ಕಳಿಗೆ ಮಾತ್ರ ಎ.ಐ.ಸಿ.ಟಿ.ಇ ಯ ಪ್ರಗತಿ , ಸಕ್ಷಮ್ ಮತ್ತು ಸ್ವನಾಥ್ ವಿದ್ಯಾರ್ಥಿವೇತನ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಅದರಂತೆ ಪ್ರತಿಯೊಬ್ಬ ಅರ್ಹ ವಿದ್ಯಾರ್ಥಿಯು ಸರ್ಕಾರದ ಯಾವುದಾದರೂ ಒಂದು ಆರ್ಥಿಕ ಸೌಲಭ್ಯವನ್ನು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ.

Scanned with OKEN Scanner

ಆದರಿಂದ 2021-22(Degree only), 2022-23 ಮತ್ತು 2023-24ನೇ ಸಾಲಿನಲ್ಲಿ ಪ್ರವೇಶ ಪಡೆದ ಅರ್ಹ ವಿದ್ಯಾರ್ಥಿಗಳು ನವೀಕರಣಕ್ಕೆ ಮತ್ತು 2024-25ನೇ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ದಿನಾಂಕ: 31-10-2024 ರಂದು ಕೋನೆಯ ದಿನಾಂಕವಾಗಿದೆ, ಅದರಂತೆ ಈ ಕೆಳಗಿನ ತಃಖ್ತೆಯಲ್ಲಿ ತಿಳಿಸಿರುವ ಪೋರ್ಟಲ್ಲಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

| Sl. No | Scheme | Portal address |
|---|---|---|
| 1 | **AICTE Pragati Scholarship Scheme**<br>(Fresh applications 2024-2025 Batch & Renewal application 2021-2022(Degree only), 2022-2023 & 2023-2024 Batches) | National Scholarship Portal<br>**https://scholarships.gov.in** |
| 3 | **AICTE Saksham Scholarship Scheme**<br>(Fresh applications 2024-2025 Batch & Renewal application 2021-2022(Degree only), 2022-2023 & 2023-2024 Batches) | National Scholarship Portal<br>**https://scholarships.gov.in** |
| 5 | **AICTE Swanath Scholarship Scheme**<br>(Fresh applications 2024-2025 Batch & Renewal application 2021-2022(Degree only), 2022-2023 & 2023-2024 Batches) | National Scholarship Portal<br>**https://scholarships.gov.in** |

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ತಿಳಿಸಿರುವ ಎ.ಐ.ಸಿ.ಟಿ.ಇ ಯ, ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ ನಲ್ಲಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

https://www.aicte-india.org/schemes/students-development-schemes/Saksham/General-Instructions

https://www.aicte-india.org/schemes/students-development-schemes/Pragati/General-Instructions

https://www.aicte-india.org/schemes/students-development-schemes/Swanath/General-Instructions

*"ಟಿಪ್ಪಣಿ ಮತ್ತು ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"*

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,

ಪ್ರಾಂಶುಪಾಲರು, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಗೆ - ಮುಂದಿನ ಅಗತ್ಯ ಕ್ರಮಕ್ಕಾಗಿ (ಸಂಸ್ಥೆಯ ಸೂಚನ ಫಲಕಗಳಲ್ಲಿ & ವೆಬ್ ಸೈಟ್ ನಲ್ಲಿ) ಪ್ರಚರ ಪಡಿಸುವುದು.

Scanned with OKEN Scanner